**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ. ಸಂಖ್ಯೆ 265/2023**

| | | |
|---|---|---|
| ಸಾಕ್ಷಿದಾರರ ಹೆಸರು | : ಚೇತನ್ ಅಲಿಯಾಸ್ ಮಹದೇವಸ್ವಾಮಿ | ಪಿಡಬ್ಲ್ಯೂ ಃ 4 |
| ತಂದೆಯ / ಗಂಡನ ಹೆಸರು | : ವೀರಭದ್ರಪ್ಪ | ಸಿಡಬ್ಲ್ಯೂ ಃ 9 |
| ವಯಸ್ಸು | : 28 ವರ್ಷ | |
| ಉದ್ಯೋಗ | : ಚಾಲಕ | |
| ವಾಸಸ್ಥಳ | : ಗೆಜ್ಜಗಹಳ್ಳಿ ಗ್ರಾಮ | |

**ಸಾಕ್ಷಿಯನ್ನು ಈ ದಿನ ದಿಃ 18.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ಮೇಲೆ ಹೇಳಿದ ವಿಳಾಸದಲ್ಲಿ ಹಲವು ವರ್ಷಗಳಿಂದ ವಾಸವಿರುತ್ತೇನೆ.

2. ನಾನು ಬಂಡಿಪಾಳ್ಯದ ಆರ್ ಎಂ ಸಿ ಯಲ್ಲಿ ಬುಲೆರೋ ಪಿಕ್ ಅಪ್ ವಾಹನದ ಚಾಲಕನಾಗಿ ಕೆಲಸ ಮಾಡುತ್ತೇನೆ. ಬಂಡೀಪಾಳ್ಯದ ಮಾಹೀ ಟೀ ಸ್ಟಾಲ್ ನನಗೆ ಗೊತ್ತು. ಸದರಿ ಅಂಗಡಿಗೆ ನಾನು ಟೀ ಕುಡಿಯಲು ಹೋಗುತ್ತಿದ್ದೆ. ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿಯನ್ನು ನಾನು ನೋಡಿರುತ್ತೇನೆ. ಸದರಿ ಆರೋಪಿಯನ್ನು ಈ ದಿನ ನ್ಯಾಯಾಲಯದಲ್ಲಿ ಹೊರತುಪಡಿಸಿ ನಾನು ಮಾಹಿ ಟೀ ಸ್ಟಾಲ್ ನ ಪಕ್ಕದ ಶಿಥಿಲಗೊಂಡ ಮಳಿಗೆ ಜಾಗದಲ್ಲಿ ನೋಡಿರುತ್ತೇನೆ ಮತ್ತು ಜೈಲ್ ನಲ್ಲಿ ನೋಡಿರುತ್ತೇನೆ.

3. ಮಾಹೀ ಟಿ ಸ್ಟಾಲ್ ನ ಶ್ಯಾಮ್ ಲಾಲ್ ರವರನ್ನು ನಾನು ನೋಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ಮಾಹೀ ಟಿ ಸ್ಟಾಲ್ ನ ಪಕ್ಕದಲ್ಲಿ ಇರುವ ಕಟ್ಟಡದಲ್ಲಿ ದಿ.21.07.2023 ರಂದು ನೋಡಿರುತ್ತೇನೆ. ಖಚಿತವಾಗಿ ದಿನಾಂಕ ನೆನಪಿರುವುದಿಲ್ಲ. ನಾನು ಮಾಹೀ ಟೀ ಸ್ಟಾಲ್ ಬಳಿ ಆ ದಿನ ಸಂಜೆ 07.30 ರ ಸುಮಾರಿಗೆ ಟೀ ಕುಡಿಯಲು ಹೋಗಿರುತ್ತೇನೆ. ಸದರಿ ಟಿ ಸ್ಟಾಲ್ ನಲ್ಲಿ ಆ ದಿನ ಸಮಾರು ಜನರು ಇದ್ದರು. ಅದರಲ್ಲಿ ನನಗೆ ಪರಿಚಯ ಎಂದರೆ ಶ್ಯಾಮ್ ಲಾಲ್ ರವರು ಇದ್ದರು. ಬೇರೆಯವರ ಪರಿಚಯ ಇರಲಿಲ್ಲ.

4. ನಾವು ಟೀ ಕುಡಿಯುತ್ತಿರುವಾಗ ಟೀ ಅಂಗಡಿಯ ಪಕ್ಕದಲ್ಲಿದ್ದ ಶಿಥಿಲಗೊಂಡ ಮಳಿಗೆಯಿಂದ ಶಬ್ದ ಬಂದ ಕಾರಣ ಶ್ಯಾಮ್ ಲಾಲ್ ಸದರಿ ಸ್ತಳಕ್ಕೆ ಹೋದರು. ನಂತರ ನಾನು ಕೂಡ ಅಲ್ಲಿಗೆ ಹೋಗಿರುತ್ತೇನೆ. ಸದರಿ ಶಿಥಿಲಗೊಂಡ ಮಳಿಗೆ ಮತ್ತು ಟೀ ಅಂಗಡಿಗೂ ಕೇವಲ 10 ಅಡಿ ಅಂತರವಿರಬಹುದು. ಆ ಸಮಯದಲ್ಲಿ ಸಂಜೆ 07.00 ಗಂಟೆ ಆಗಿದ್ದು, ಆ ಸಮಯದಲ್ಲಿ ಮಳಿಗೆಗಳಲ್ಲಿ ಲೈಟ್ ಬೆಳಕು ಇತ್ತು. ನಾನು ಅಲ್ಲಿಗೆ ಹೋಗಿ ನೋಡಿದಾಗ ಒಬ್ಬ ವಯಸ್ಸಾದ ವ್ಯಕ್ತಿ ಇದ್ದು, ಆತನ ಕತ್ತಿನ ಬಳಿಯೆಲ್ಲಾ ರಕ್ತವಾಗಿತ್ತು. ಆತ ಅಲ್ಲಿಯೇ ಬಿದ್ದಿದ್ದು, ಮಾತನಾಡುವ ಸ್ತಿತಿಯಲ್ಲಿ ಇರಲಿಲ್ಲ. ಅಲ್ಲಿಯೇ ಆರೋಪಿಯನ್ನು ನೋಡಿರುತ್ತೇನೆ. ಆತ ಪಕ್ಕದಲ್ಲಿಯೇ 4 ಅಡಿ ಅಂತರದಲ್ಲಿ ಆರೋಪಿ ಕುಳಿತಿದ್ದ. ಸದರಿ ಕಟ್ಟಡದ ಒಳಗಡೆ ಅವರಿಬ್ಬರನ್ನು ಬಿಟ್ಟು ಬೇರೆ ಯಾರು ಇರಲಿಲ್ಲ. ಸದರಿ ವಯಸ್ಸಾದ ವ್ಯಕ್ತಿಯ ಬಟ್ಟೆಗಳೆಲ್ಲಾ ರಕ್ತವಾಗಿದ್ದವು ಮತ್ತು ಸ್ತಳದಲ್ಲೂ ಕೂಡ ರಕ್ತ ಬಿದ್ದಿತ್ತು. ಸ್ತಳದಲ್ಲಿ ಕಟ್ಟಡವನ್ನು ಹೊಡೆದಿದ್ದ ಕಲ್ಲುಗಳು ಬಿದಿದ್ದವು. ಮತ್ತೇ ಏನು ಬಿದ್ದಿತು ಎಂದು ನನಗೆ ಈಗ ಸರಿಯಾಗಿ ನೆನಪಿರುವುದಿಲ್ಲ.

5. ನಂತರ ಶ್ಯಾಮ್ ಲಾಲ್ ನಾಗಲೋಕ ಬಾರ್ ನ ರಮೇಶ್ ರವರಿಗೆ ಫೋನ್ ಕರೆಯಾಮರಿದ್ದು, ರಮೇಶ್ ಅವರ ಮಾಲೀಕರಿಗೆ ಕರೆ ಮಾಡಿ ವಿಷಯವನ್ನು ತಿಳಿಸಿದರು. ನಂತರ ಸ್ಥಳಕ್ಕೆ ಪೊಲೀಸರು ಬಂದರು. ಸ್ಥಳಕ್ಕೆ ಆ್ಯಂಬೂಲೆನ್ಸ್ ಕರೆಸಿ ಸದರಿ ಬಿದ್ದ ವ್ಯಕ್ತಿಯನ್ನು ಆ್ಯಂಬೂಲೆನ್ಸ್ ನಲ್ಲಿ ತೆಗೆದುಕೊಂಡು ಹೋದರು. ಸದರಿ ವ್ಯಕ್ತಿಗೆ ಸುಮಾರು 60 ವರ್ಷ ದ ಮೇಲೆ ವಯಸ್ಸಾಗಿತ್ತು. ಅಷ್ಟರಲ್ಲಿ ಸ್ಥಳದಿಂದ ಆರೋಪಿ ಹೊರಟು ಹೋಗಿದ್ದನು. ನಂತರ ಸದರಿ ವ್ಯಕ್ತಿ ಆಸ್ಪತ್ರೆಯ ಗೆ ಹೋಗುವಷ್ಟರಲ್ಲಿ ತೀರಿಕೊಂಡನು ಎಂದು ತಿಳಿದು ಬಂದಿತ್ತು.

6. ಸ್ಥಳದಲ್ಲಿದ್ದ ಇಟ್ಟಿಗೆ ಮತ್ತು ಕಲ್ಲುಗಳ ರಕ್ತವಾಗಿದ್ದವು. ಸದರಿ ವಸ್ತುಗಳನ್ನು ಇಟ್ಟಿಗೆಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ಮುದ್ದೆ ಮಾಲು-6 ನ್ನು ನೋಡಿ ಗುರುತಿಸಿರುತ್ತಾರೆ. ಮಾರನೇ ದಿನ ನನ್ನನ್ನು ಪೊಲೀಸರು ಠಾಣೆಗೆ ಕರೆಸಿದ್ದರು. ಪೊಲೀಸರು ನನನ್ನು ಹಿಂದಿನ ದಿನ ನಡೆದ ಘಟನೆಯ ಬಗ್ಗೆ ವಿಚಾರಿಸಿ, ಹೇಳಿಕೆಯನ್ನು ಬರೆದುಕೊಂಡಿರುತ್ತಾರೆ. ನಂತರ ಒಂದು ತಿಂಗಳ ಒಳಗಡೆ ನನನ್ನು ಮತ್ತೊಮ್ಮೆ ಠಾಣೆಗೆ ಕರೆಸಿ ಅಲ್ಲಿಂದ ನ್ಯಾಯಾಲಯಕ್ಕೆ ಹೋಗಿ ನಂತರ ಆರೋಪಿಯನ್ನು ಗುರುತಿಸಲು ಕರೆದುಕೊಂಡು ಹೋಗಿರುತ್ತಾರೆ. ನ್ಯಾಯಾಲಯದಲ್ಲಿ ನಾನು ನ್ಯಾಯಾಧೀಶರ ಮಂದೆ ನಡೆದ ಘಟನೆ ಬಗ್ಗೆ, ತಿಳಿಸಿರುತ್ತೇನೆ. ನ್ಯಾಯಾಧೀಶರ ಮುಂದೆ ಹೇಳಿದ ಹೇಳಿಕೆಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯೂ ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದ , ಸದರಿ ದಾಖಲೆಯು ಕಲಂ 164 ಅಡಿಯ ಹೇಳಿಕೆ ಆಗಿದ್ದು, ಅದನ್ನು ನಿಪಿ.18 ಎಂದು, ಸಾಕ್ಷಿಯ ಸಹಿಯನ್ನು ನಿಪಿ.18(ಎ) ರಿಂದ (ಸಿ) ಎಂದು ಗುರುತಿಸಲಾಯಿತು.

7. ನಂತರ ಒಂದು ವಾರದಿಂದ 10 ದಿನಗಳ ಬಳಿಕ ನನ್ನನ್ನು ಮೈಸೂರು ಜೈಲ್ ಗೆ ಕರೆದುಕೊಂಡು ಹೋಗಿದ್ದು , ಅಲ್ಲಿ ತಹಶೀಲ್ದಾರ್ ರವರು ಇದ್ದರೂ. ಅಲ್ಲಿ 5–6 ಜನರನ್ನು ನಿಲ್ಲಿಸಿ 3 ಬಾರಿ ಬೇರೆ ಬೇರೆ ರೀತಿಯಲ್ಲಿ ನಿಲ್ಲಿಸಿ , ಘಟನೆ ದಿನ ನೋಡಿದ ವ್ಯಕ್ತಿಯನ್ನು ಗುರುತಿಸಲು ಹೇಳಿದರು. ನಾನು ಮೂರು ಬಾರಿಯೂ ಸಹ ಸದರಿ ವ್ಯಕ್ತಿಯನ್ನು ಗುರುತಿಸಿರುತ್ತೇನೆ. ಸದರಿ ವ್ಯಕ್ತಿಯೂ ಈ ದಿನ ನ್ಯಾಯಾಲಯದ ಮಂದೆ ಹಾಜರು ಇದ್ದ ಆರೋಪಿಯಾಗಿರುತ್ತಾನೆ. ಅಲ್ಲಿ ನನ್ನನ್ನು ತಹಶೀಲ್ದಾರ್ ರವರನ್ನು ಮತ್ತು ಸರದಿಯಲ್ಲಿ ನಿಂತ ವ್ಯಕ್ತಿಯನ್ನು ಬಿಟ್ಟು ಬೇರೆ ಯಾರು ಇರಲಿಲ್ಲ.

8. ಈ ಹಂತದಲ್ಲಿ ಅಸಲು ಗುರುತು ಕವಾಯತ್ತು ವರದಿ ಕಡತದಲ್ಲಿ ಇರುವುದಿಲ್ಲ, ಕೇವಲ ದೃಢಿಕೃತ ಪ್ರತಿ ಇರುತ್ತದೆ. ಸದರಿ ದಾಖಲೆಯನ್ನು ಹಾಜರುಪಡಿಸಲು ಸೂಚಿಸಿದ್ದು , ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

**(ಮುಂದುವರೆದ ಮುಖ್ಯ ವಿಚಾರಣೆಗೆ ಸಮಾಯಾವಕಾಶ ಕೋರಿದ್ದು, ಸಮಯ ನೀಡಿ, ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.** )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**